

ಮೇಲೆ ಬಂದೂಕು ಹೊತ್ತಿದ್ದ ಪುಟ್ಟಣ್ಣ ಮುಂದೆ, ನಾಯಿಯ ಬಿಳಿಯ ಹೆಣವನ್ನು ಹೊತ್ತಿದ್ದ ಬೈರ ಹಿಂದೆ, ಅವರ ಸುತ್ತಲೂ ಸಣ್ಣ ದೊಡ್ಡ ನಾಯಿಗಳ ಗುಂಪು, ಅದೊಂದು ಸ್ಮಶಾನ ಮೆರವಣಿಗೆಯಂತಿತ್ತು. ಅದೇ ಶೋಕ, ಅದೇ ಮೌನ, ಅದೇ ಗಾಂಭೀರ್ಯ! ಆದರೆ ಮೃತ್ಯುಸೂಚಕವಾದ ವಾದ್ಯಗಳಿರಲಿಲ್ಲ. ಪುಟ್ಟಣ್ಣ ತನ್ನ ಅತ್ಯಂತ ಅಮೂಲ್ಯವಾದ ಪಂಚೆಯೊಂದನ್ನು ಸುತ್ತಿ ಅದನ್ನು ಮಣ್ಣಿನಲ್ಲಿ ಹೂಳಿ ದುಃಖಿಸುವ ಪರಿಯನ್ನು ಕಂಡು ಹೊಲೆಯರ ಬೈರನು 'ನಾಯಿಗಾಗಿ ಈ ಪಾಟಿ ದುಃಖಿಸುವವರುಂಟೆ' ಎಂದು ಆಶ್ಚರ್ಯಪಡುತ್ತಾನೆ.

ಕುವೆಂಪು ಸೃಷ್ಟಿಸಿದ ಶ್ವಾನ ಪ್ರಪಂಚದಲ್ಲಿ ಕಾನೂರಿನ 'ಟೈಗರ್' ತುಂಬಾ ವಿಶೇಷವಾಗಿ ಚಿತ್ರಿತಗೊಂಡಿದೆ. ಅದಕ್ಕೆ ಕಾರಣ ಅದು ಬೇಟೆಯಲ್ಲಿ ತೋರಿಸುತ್ತಿದ್ದ ಚಾಣಾಕ್ಷತೆ. ಅದೇ ರೀತಿ ಅನೇಕ ನಾಯಿಗಳು ಇವರ ಎರಡು ಕಾದಂಬರಿಯಲ್ಲಿ ಮಾನವನ ಸಂಗಾತಿಯಾಗಿ ಮೂಡಿಬರುತ್ತವೆ. ಇತ್ತೀಚೆಗೆ ಕನ್ನಡದಲ್ಲಿ ಬಂದ 'ನಾನು ಮತ್ತು ಗುಂಡ', 'ಚಾರ್ಲಿ-777'ನಂತಹ ಸಿನಿಮಾಗಳು ಮನುಷ್ಯ ಮತ್ತು ಪ್ರಾಣಿ ಸಂಬಂಧದ ಸಾಪೇಕ್ಷ ಗುರುತುಗಳನ್ನು ಇರಿಸುವಲ್ಲಿ ಸಾಫಲ್ಯತೆಯನ್ನು ಕಂಡಿವೆ. ಅಲ್ಲಿ ತಾವು ಸಾಕಿದ ನಾಯಿಯ ಸಲುವಾಗಿ ವ್ಯಕ್ತಿ ಏನೆಲ್ಲಾ ತ್ಯಾಗ ಮಾಡುತ್ತಾನೆ. ಹಾಗೇ ಅವನ ಮತ್ತು ನಾಯಿಯ ನಡುವಿನ ನಿಯತ್ತಿನ ಸಂಬಂಧದಲ್ಲಿ ಯಾವುದೇ ರೀತಿಯ ವಂಚನೆ ಕಂಡುಬರುವುದಿಲ್ಲ. ಆದರೆ, ಅದೇ ಮನುಷ್ಯ – ಮನುಷ್ಯನ ನಡುವೆ ಎಷ್ಟೇ ಸಹಕಾರ, ಪ್ರೀತಿ, ವಿಶ್ವಾಸ, ಅಂತಃಕರಣ ಇದ್ದರೂ ಅದು ಅನೇಕ ಮಾದರಿಯಲ್ಲಿ ಮೋಸವನ್ನೇ ಪ್ರದರ್ಶಿಸಲು ಹವಣಿಸುತ್ತದೆ. ಆದರೆ, ಮಾನವ ಪ್ರಾಣಿಗಳ ನಡುವೆ ಇರುವ ಸಂಬಂಧ ಇದೆಲ್ಲಕ್ಕಿಂತ ಮಿಗಿಲಾದದ್ದು ಎಂಬುವುದನ್ನು ಪುಟ್ಟಣ್ಣ ಮತ್ತು ಟೈಗರ್‌ನಂತಹ ಸಂಬಂಧಗಳ ಮೂಲಕ ಕುವೆಂಪು ನಮಗೆ ಕಾಣಿಸಿದ್ದಾರೆ. ಈ ನಿಟ್ಟಿನಲ್ಲಿ ಶ್ವಾನವು ಮಾನವನಿಗೆ ತುಂಬಾ ಆತ್ಮೀಯವಾಗಿ, ನಿಕಟವರ್ತಿಯಾಗಿ ಕಂಡುಬರುತ್ತದೆ. ಅಲ್ಲದೇ ನಮ್ಮ ಬದುಕಿನ ಸಹವರ್ತಿಯಾಗಿಯೂ ಇಂದಿಗೂ ಆತ್ಮೀಯತೆಯಲ್ಲಿದೆ. ಜೀವಸಂಬಂಧಗಳನ್ನು ಬೆಸೆಯುವ ಇಂತಹ ಕ್ಷಣಗಳು ವರ್ತಮಾನಕ್ಕೂ ಬೇಕು ಎಂದು ನನಗೆ ಅನೇಕ ಬಾರಿ ಅನಿಸುತ್ತದೆ. ●